# 9ನೇ ತರಗತಿ ಅರ್ಧವಾರ್ಷಿಕ ಪರೀಕ್ಷೆ 2019

ಸಮಯ : 3.00 ಗಂಟೆ | ವಿಷಯ: **ಸಮಾಜ ವಿಜ್ಞಾನ** | ಗರಿಷ್ಠ ಅಂಕಗಳು : 90

---

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **10x1=10**

1) 'ಹಿಜಿರಾ' ಎಂದರೆ,
   ಎ) ರಂಜಾನ್ ತಿಂಗಳಲ್ಲಿ ಉಪವಾಸ ಮಾಡುವುದು
   ಬಿ) ಪೈಗಂಬರರು ಸಾ.ಶ. 622ರಲ್ಲಿ ಮೆಕ್ಕಾದಿಂದ ಮದೀನಕ್ಕೆ ಪ್ರಯಾಣ ಬೆಳೆಸಿದ್ದು
   ಸಿ) ಪೈಗಂಬರರ ತತ್ವಗಳನ್ನು ಮೆಕ್ಕಾದಲ್ಲಿ ಪ್ರಚಾರ ಮಾಡಿದ್ದು
   ಡಿ) ಜೀವಿತದಲ್ಲೊಮ್ಮೆ ಮೆಕ್ಕಾ ಯಾತ್ರೆ ಮಾಡುವುದು
2) 'ಭಾರತದ ಗಿಳಿ' ಎಂದು ಕರೆಯಲ್ಪಡುವವರು
   ಎ) ಕುತುಬ್ದ್ದೀನ್ ಐಬಕ್  ಬಿ) ಅಮೀರ್ ಖುಸ್ರು  ಸಿ) ಬಲ್ಬನ್  ಡಿ) ಅಲ್ಬೆರೂನಿ
3) ಶ್ರೀ ಕೃಷ್ಣದೇವರಾಯ ತೆಲಗಿನಲ್ಲಿ ಬರೆದ ಕೃತಿ
   ಎ) ಜಾಂಬವತಿ ಕಲ್ಯಾಣ  ಬಿ) ಮಧುರಾ ವಿಜಯ  ಸಿ) ಅಮುಕ್ತ ಮೌಲ್ಯದ  ಡಿ) ಪೃಥ್ವಿರಾಜ್ ರಾಸೋ
4) ರಾಜ್ಯ ಶಾಸಕಾಂಗದ ಎರಡು ಸದನಗಳೆಂದರೆ,
   ಎ) ಲೋಕಸಭೆ ಮತ್ತು ರಾಜ್ಯಸಭೆ  ಬಿ) ಲೋಕಸಭೆ ಮತ್ತು ವಿಧಾನಸಭೆ
   ಸಿ) ವಿಧಾನಸಭೆ ಮತ್ತು ವಿಧಾನ ಪರಿಷತ್  ಡಿ) ರಾಜ್ಯಸಭೆ ಮತ್ತು ವಿಧಾನ ಪರಿಷತ್
5) ಯಾವುದು ಕೇಂದ್ರ ಕುಟುಂಬದ ಲಕ್ಷಣವಲ್ಲ?
   ಎ) ಚಿಕ್ಕ ಗಾತ್ರ  ಬಿ) ಸಂಕೀರ್ಣತೆ  ಸಿ) ಆಧುನಿಕ ತಂತ್ರಜ್ಞಾನಕ್ಕೆ ಒಲವು  ಡಿ) ಗಾತ್ರದಲ್ಲಿ ದೊಡ್ಡದು
6) ಜಾಹಿರಾತು ಮತ್ತು ಚಲನಚಿತ್ರಗಳು ಈ ಸಮಾಜೀಕರಣದ ನಿಯೋಗಿಗೆ ಸಂಬಂದಿಸಿವೆ.
   ಎ) ಶಿಕ್ಷಣ  ಬಿ) ಕುಟುಂಬ  ಸಿ) ಸಮೂಹ ಮಾಧ್ಯಮ  ಡಿ) ನೆರೆಹೊರೆ
7) ಕರ್ನಾಟಕದ ಅತಿ ದೊಡ್ಡ ಜಿಲ್ಲೆ
   ಎ) ಮೈಸೂರು  ಬಿ) ಮಂಡ್ಯ  ಸಿ) ಬೆಳಗಾವಿ  ಡಿ) ಕೊಡಗು
8) ಮುಗಿದು ಹೋಗದಿರುವ ಸಂಪನ್ಮೂಲಕ್ಕೆ ಇದು ಉದಾಹರಣೆ.
   ಎ) ಸೌರಶಕ್ತಿ  ಬಿ) ಕಲ್ಲಿದ್ದಲು  ಸಿ) ಪೆಟ್ರೋಲಿಯಂ  ಡಿ) ಮ್ಯಾಂಗನೀಸ್
9) 2011ರ ಜನಗಣತಿ ಪ್ರಕಾರ ಭಾರತದ ಜನಸಾಂದ್ರತೆ
   ಎ) 650  ಬಿ) 720  ಸಿ) 850  ಡಿ) 382
10) ನೌಕರರ ಅಥವಾ ಕೆಲಸಗಾರರ ನಡುವೆ ಅವರು ಮಾಡಬೇಕಾದ ಕಾರ್ಯಗಳನ್ನು ಕ್ರಮಬದ್ಧವಾಗಿ ವಿಭಜಿಸುವುದು ನಿರ್ವಹಣೆಯ ಯಾವ ತತ್ವಕ್ಕೆ ಸಂಬಂಧಿಸಿದೆ.
   ಎ) ಏಕರೂಪದ ಆದೇಶ  ಬಿ) ಹಂತ ಸರಣಿ  ಸಿ) ಕಾರ್ಯ ವಿಭಜನೆ  ಡಿ) ಶಿಸ್ತು

**II ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **9x1=9**

11) ಮೊದಲ ತರೈನ್ ಕದನ ಯಾರ ನಡುವೆ ನಡೆಯಿತು?
12) ದೆಹಲಿಯನ್ನಾಳಿದ ಮೊದಲ ಮಹಿಳೆ ಯಾರು?
13) ಸುಪ್ರೀಂಕೋರ್ಟ್‌ನ್ನು 'ಮೂಲಭೂತ ಹಕ್ಕುಗಳ ರಕ್ಷಕ' ಎಂದು ಕರೆಯಲಾಗಿದೆ. ಏಕೆ?
14) ಕೇಂದ್ರ ಕುಟುಂಬ ಎಂದರೇನು?
15) ಕುಟುಂಬದಿಂದ ಮಗು ಕಲಿಯುವ ಯಾವುದಾದರೂ ಎರಡು ಮೌಲ್ಯಗಳನ್ನು ತಿಳಿಸಿ.
16) ಉತ್ತರದ ಮೈದಾನವನ್ನು 'ಬಿಸಿಲ ನಾಡು' ಎಂದು ಏಕೆ ಕರೆಯುತ್ತಾರೆ?
17) ಭೂಬಳಕೆ ಎಂದರೇನು?
18) ಜನನ ದರ ಎಂದರೇನು?
19) ಜೆ.ಹೆಚ್. ಹೇನ್ಸ್ ರವರ ವ್ಯವಹಾರ ನಿರ್ವಹಣೆಯ ವ್ಯಾಖ್ಯೆ ಏನು?

(ಪು.ತಿ.ನೋ.)

**III ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡರಿಂದ–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **10x2=20**

20) ಅಲ್ಲಾವುದ್ದೀನ್ ಖಿಲ್ಜಿಯು ಜಾರಿಗೆ ತಂದ ಮಾರುಕಟ್ಟೆ ಸುಧಾರಣೆಗಳಾವುವು?

21) ಭಕ್ತಿ ಚಳವಳಿಯಿಂದಾದ ಪರಿಣಾಮಗಳಾವುವು?

22) ವಿಜಯನಗರವನ್ನಾಳಿದ ನಾಲ್ಕು ರಾಜ ಮನೆತನಗಳಾವುವು?

23) ಕೇಂದ್ರ ಮಂತ್ರಿಮಂಡಲದ ಎರಡು ರೀತಿಯ ಹೊಣೆಗಾರಿಕೆಗಳಾವುವು?

24) ರಾಜ್ಯಪಾಲರ ಕಾರ್ಯಾಂಗಾಧಿಕಾರಗಳಾವುವು?

**ಅಥವಾ**

ರಾಜ್ಯಪಾಲರ ಶಾಸನೀಯ ಅಧಿಕಾರಗಳಾವುವು?

25) ಸಾಮಾಜಿಕ ನಿಯೋಗಿಯಾಗಿ ಸಮವಯಸ್ಕರ ಪಾತ್ರವೇನು?

**ಅಥವಾ**

ಸಾಮಾಜಿಕ ನಿಯೋಗಿಯಾಗಿ ಶಾಲೆಯ ಪಾತ್ರವೇನು?

26) ಕರ್ನಾಟಕದ ಪ್ರಮುಖ ಘಟ್ಟಮಾರ್ಗಗಳಾವುವು?

27) ಕಾವೇರಿ ನದಿಯ ಉಪನದಿಗಳಾವುವು?

28) ವಾಣಿಜ್ಯ ಬೇಸಾಯ ಎಂದರೇನು? ಉದಾಹರಣೆ ಕೊಡಿ.

29) ಮಾನವ ಬಂಡವಾಳವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರವೇನು?

**IV ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಉತ್ತರಿಸಿ.** **10x3=30**

30) ಇಸ್ಲಾಂ ಧರ್ಮ ಪ್ರಚಾರವಾಗಲು ಕಾರಣವಾದ ಅಂಶಗಳಾವುವು?

31) ಅದ್ವೈತ ಸಿದ್ಧಾಂತವನ್ನು ವಿವರಿಸಿ.

**ಅಥವಾ**

ಬಸವೇಶ್ವರರ ಕಾಯಕ ತತ್ವವನ್ನು ವಿವರಿಸಿ.

32) ಕಲೆ ಮತ್ತು ವಾಸ್ತುಶಿಲ್ಪಕ್ಕೆ ವಿಜಯನಗರ ಸಾಮ್ರಾಜ್ಯದ ಕೊಡುಗೆಗಳೇನು?

33) ಲೋಕಸಭಾ ಸದಸ್ಯರಾಗಲು ಬೇಕಾದ ಅರ್ಹತೆಗಳೇನು?

34) ಕುಟುಂಬದ ಲಕ್ಷಣಗಳನ್ನು ತಿಳಿಸಿ.

35) ಉತ್ತರ ಮೈದಾನ ಮತ್ತು ದಕ್ಷಿಣ ಮೈದಾನಕ್ಕಿರುವ ವ್ಯತ್ಯಾಸಗಳೇನು?

36) ಕರ್ನಾಟಕದಲ್ಲಿ ಕಂಡುಬರುವ ನಾಲ್ಕು ಋತುಮಾನಗಳಾವುವು?

37) ಕರ್ನಾಟಕದಲ್ಲಿ ಪೂರ್ವಾಭಿಮುಖವಾಗಿ ಹಾಗೂ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳನ್ನು ಪಟ್ಟಿಮಾಡಿರಿ.

**ಅಥವಾ**

ಕರ್ನಾಟಕದ ಪ್ರಮುಖ ಜಲವಿದ್ಯುತ್ ಯೋಜನೆಗಳನ್ನು ಪಟ್ಟಿಮಾಡಿರಿ.

38) ಸಂಪನ್ಮೂಲಗಳ ಕೊರತೆಗೆ ಕೈಗೊಳ್ಳಬಹುದಾದ ಕ್ರಮಗಳೇನು?

39) ನಿರ್ವಹಣೆಯ ತತ್ವಗಳನ್ನು ತಿಳಿಸಿ.

**ಅಥವಾ**

ನಿರ್ವಹಣೆಯ ಕಾರ್ಯವ್ಯಾಪ್ತಿಯನ್ನು ತಿಳಿಸಿ.

**V ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4x4=16**

40) ಜೀಸಸ್ ಕ್ರಿಸ್ತರ ಬೋಧನೆಗಳನ್ನು ವಿವರಿಸಿ.

**ಅಥವಾ**

ಇಸ್ಲಾಂ ಧರ್ಮದ ಆಚರಣೆಗಳನ್ನು ವಿವರಿಸಿ.

41) ಮಹಮ್ಮದ್ ಬಿನ್ ತುಘಲಕ್‌ನ ಆಡಳಿತಾತ್ಮಕ ಸುಧಾರಣೆಗಳಾವುವು?

42) ಭಾರತ ಸಂವಿಧಾನದ ಲಕ್ಷಣಗಳನ್ನು ತಿಳಿಸಿ.

43) ಕರ್ನಾಟಕದ ನಿತ್ಯಹರಿದ್ವರ್ಣ ಕಾಡುಗಳಿಗೂ ಎಲೆ ಉದುರಿಸುವ ಸಸ್ಯವರ್ಗಗಳಿಗಿರುವ ವ್ಯತ್ಯಾಸಗಳಾವುವು?

**VI 44) ಕರ್ನಾಟಕದ ನಕ್ಷೆಯನ್ನು ಬರೆದು ಈ ಕೆಳಕಂಡ ಸ್ಥಳಗಳನ್ನು ಗುರುತಿಸಿ.** **1+3=5**

ಎ) ಕರ್ನಾಟಕದ ರಾಜಧಾನಿ   ಬಿ) ನಿಪ್ಪಾಣಿ   ಸಿ) ಕರ್ನಾಟಕದ ಕಿತ್ತಳೆ ನಾಡು   ಡಿ) ಕರ್ನಾಟಕದ ಕರಾವಳಿ